ಇ) ಆರಕ್ಷಕ ಇಲಾಖೆಯಿಂದ 105ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು, ಕೋರಿಕೆ ಬಂದಿದೆ. ಇವುಗಳಲ್ಲಿ ಅತಿ ಅವಶ್ಯಕವಾಗಿ ಬೇಕಾಗಿರುವ 37 ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಾಣ, ಚಾಲನೆ ಮತ್ತು ವರ್ಗಾವಣೆ(ಬಿ.ಓ.ಟಿ) ಆಧಾರದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಇವುಗಳ ಪೈಕಿ 7 ಪಾದಚಾರಿ ಮೇಲು ಸೇತುವೆಗಳನ್ನು ಪೈಲಟ್ ಆಧಾರದಲ್ಲಿ ನಿರ್ಮಿಸಲು ಮತ್ತು ಉಳಿದ 30 ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಟೆಂಡರ್ ಕರೆಯುವ ಮೂಲಕ ಕ್ರಮ ವಹಿಸಲಾಗುವುದು. ಈ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಬಿ.ಓ.ಟಿ.ದಾರರೇ ಭರಿಸಲಿರುವರು. ಪ್ರತಿಯೊಂದು ಪಾದಚಾರಿ ಮೇಲು ಸೇತುವೆ ನಿರ್ಮಾಣಕ್ಕೆ ಸ್ಥಳಕ್ಕೆ ಅನುಗುಣವಾಗಿ ಸುಮಾರು 50 ರಿಂದ 60 ಲಕ್ಷ ರೂ. ವೆಚ್ಚವಾಗುವುದು.

1019(1035) ಶ್ರೀ ಎಸ್.ರಘು. (ಶಾಂತಿನಗರ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕ ಸೇವಾ ಕೇಂದ್ರಗಳನ್ನು ಆರಂಭಿಸಿದೆಯೇ(ಸ್ಥಳಗಳ ವಿವರ ನೀಡುವುದು);

ಆ) ಸದರಿ ನಾಗರೀಕ ಸೇವಾ ಕೇಂದ್ರಗಳ ಸ್ಥಾಪನೆ ಉದ್ದೇಶವೇನು ಹಾಗೂ ಆ ಉದ್ದೇಶ ಈಡೇರಿದೆಯೇ;

ಇ) ನಾಗರೀಕ ಸೇವಾ ಕೇಂದ್ರಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದಿರಲು ಕಾರಣವೇನು;

ಈ) ಸದರಿ ಕೇಂದ್ರಗಳನ್ನು ಯಶಸ್ವಿಯಾಗುವಂತೆ ಮಾಡಲು ಕೈಗೊಂಡಿರುವ ಕ್ರಮಗಳೇನು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕ ಸೇವಾ ಕೇಂದ್ರಗಳನ್ನು ಆರಂಭಿಸಿದೆ. ಅವುಗಳ ಸ್ಥಳದ ವಿವರ ಈ ಕೆಳಕಂಡಂತಿದೆ:

1. ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಕಛೇರಿ
2. ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, (ಪೂರ್ವ ವಲಯ)
3. ಉಪ ಆಯುಕ್ತರು (ಪಶ್ಚಿಮ)ರವರ ಕಛೇರಿ, ಅಂಚೆಗೆ ರಸ್ತೆ, ಮಲ್ಲೇಶ್ವರಂ
4. ಉಪ ಆಯುಕ್ತರು (ದಕ್ಷಿಣ) ರವರ ಕಛೇರಿ, 2ನೇ ಬ್ಲಾಕ್, ಜಯನಗರ

ಆ) ನಾಗರೀಕ ಸೇವಾ ಕೇಂದ್ರಗಳ ಉದ್ದೇಶಗಳು :

1. ಬೆಂಗಳೂರು ನಾಗರೀಕರಿಗೆ ಉತ್ತಮ ಸೇವೆ ನೀಡುವುದು.

2. ನಾಗರೀಕರು ಸದರಿ ಕೇಂದ್ರಗಳಲ್ಲಿ ಯಾವುದೆ ವಾಡಿಕೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

a) ಜನನ ಮತ್ತು ಮರಣ ಪ್ರಮಾಣ ಪತ್ರ

b) ಆಸ್ತಿ ತೆರಿಗೆ ಪಾವತಿ

c) ಖಾತಾ ನೊಂದಾವಣೆ/ ವರ್ಗಾವಣೆ/ ವಿಭಜನೆ / ಒಂದುಗೂಡಿಸುವಿಕೆ / ಖಾತಾ ಪ್ರಮಾಣ ಪತ್ರ / ಖಾತಾ ಎಕ್ಸ್‌ಟ್ರಾಕ್ಟ್ ಇತ್ಯಾದಿ

d) ರಸ್ತೆ ಅಗೆಯಲು ಅನುಮತಿ

e) ಕಟ್ಟಡ ನಕ್ಷೆ ಮಂಜೂರಾತಿ

f) ಸಾರ್ವಜನಿಕ ಮಂಜೂರಾತಿ

g) ಮಾಹಿತಿ ಪುಸ್ತಕ, ಅರ್ಜಿ ನಮೂನೆಗಳು ನಾಗರೀಕರು ಮೇಲೆ ಹೇಳಿದ ಸೌಲಭ್ಯಗಳನ್ನು ಬಳಸಿಕೊಂಡು ಪ್ರಯೋಜನವನ್ನು ಪಡೆದಿದ್ದು, ನಾಗರೀಕ ಸೇವಾ ಕೇಂದ್ರಗಳ ಸ್ಥಪನೆ ಉದ್ದೇಶ ಈಡೇರಿದೆ.

ಇ) ಪ್ರಶ್ನೆ –(ಆ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕರ ಅನುಕೂಲಕ್ಕಾಗಿ ಸ್ಥಾಪಿಸಿರುವ 4 ನಾಗರೀಕ ಸೇವಾ ಕೇಂದ್ರಗಳಲ್ಲಿ ಇಲ್ಲಿಯವರೆವಿಗೆ 95;998 ಸಂಖ್ಯೆಯ ದಾಖಲೆಗಳನ್ನು ನಾಗರೀಕರು ಪಡೆದುಕೊಂಡಿರುತ್ತಾರೆ.

1020(1555) ಶ್ರೀ ರಘುಪತಿ ಭಟ್ .ಕೆ (ಉಡುಪಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಉಚಿತ ಸಹಾಯಧನ ಸೌಲಭ್ಯಕ್ಕಾಗಿಬಡ ಮೀನುಗಾರರು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ನಂದಿದೆಯೇ:

ಆ) ಬಂದಲ್ಲಿ ಅರ್ಜಿಗಳ ಸಂಖ್ಯೆ ಎಷ್ಟು; ಫಲಾನುಭವಿಗಳೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು) :

ಇ) ಈ ಯೋಜನೆ ಅಡಿಯಲ್ಲಿ ಉಚಿತ ಧನ ಸಹಾಯ ನೀಡುವಾಗ RTCಯನ್ನು ಕೇಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸೌಲಭ್ಯವನ್ನು RTC ಇಲ್ಲದ ಬಡ ಮೀನುಗಾರರಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಮತ್ಸ್ಯಾಶ್ರಯ ಯೋಜನೆಯಡಿ 452 ಪ್ರಸ್ತಾವನೆಗಳ ಮೂಲಕ ಒಟ್ಟು 30,518 ಅರ್ಜಿಗಳು ಅಪೇಕ್ಷಿತ ಫಲಾನುಭವಿಗಳಿಂದ ಬಂದಿವೆ. ಈ ಯೋಜನೆಯಡಿ ಬಂದಿರುವ ತಾಲ್ಲೂಕುವಾರು/ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು. ಈ ಯೋಜನೆಯ ಪ್ರಕಾರ ಫಲಾನುಭವಿಯು ಸ್ವಂತ ನಿವೇಶನ ಹೊಂದಿದ್ದಲ್ಲಿ ಮಾತ್ರ ಮನೆ ನಿರ್ಮಾಣಕ್ಕೆ ಉಚಿತ ಸಹಾಯಧನ ಪಡೆಯಲು ಅರ್ಹನಾಗಿರುತ್ತಾನೆ. ಆದುದರಿಂದ ನಿವೇಶನವನ್ನು ಹೊಂದಿರುವ ದಾಖಲಾತಿಗಳನ್ನು ಪಡೆದ ಅರ್ಜಿದಾರರನ್ನು ಮಾತ್ರ ಈ ಯೋಜನೆಯಲ್ಲಿ ಪರಿಗಣಿಸಲಾಗುವುದು.

ಅನುಬಂಧ

ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಬಂದಿರುವ ತಾಲ್ಲೂಕುವಾರು/ ಕ್ಷೇತ್ರವಾರು ಅರ್ಜಿದಾರರ ವಿವರಗಳು

ಕ್ರ. ಸಂ	ತಾಲ್ಲೂಕುವಾರು / ಕ್ಷೇತ್ರವಾರು	ಅರ್ಜಿಗಳ ಸಂಖ್ಯೆ
	ಬಾಗಲಕೋಟೆ ಜಿಲ್ಲೆ	
1	ಬಾದಮಿ	50
2	ಬಾಗಲಕೋಟೆ	50